**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 54/2023**

**ಚಾ.ಸಾಃ 5, ಫ್ರಾ.ಸಾಃ 6**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣ ಆಚಾರಿ |
| ತಂದೆಯ ಹೆಸರು | ಚಂದ್ರಶೇಖರ ಆಚಾರಿ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ಕಾರ್ಪೆಂಟರ್ ಕೆಲಸ |
| ವಾಸ್ತವ್ಯ | ತುಳಸಿನಗರ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 08-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಚಾಸಾ-1 ಪರಿಚಯ. ನಾನು ಅವರ ಮನೆಯಲ್ಲಿ ಕೆಲಸ ಮಾಡುತ್ತೇನೆ.

ದಿನಾಂಕ 06-03-2023 ರಂದು ಚಾಸಾ-1 ರವರ ಮನೆಯಲ್ಲಿ ಹಣ ಕಳ್ಳತನ ಆಗಿತ್ತು. ಸದರಿ ವಿಚಾರವಾಗಿ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಅಲ್ಲಿ ಒಬ್ಬ ವ್ಯಕ್ತಿ ಇದ್ದು ಮತ್ತು ಕೃತ್ಯಕ್ಕೆ ಬಳಸಿದ್ದ ಒಂದು ಬೈಕ್ ಇತ್ತು. ಪೋಲೀಸರು ಸದರಿ ವ್ಯಕ್ತಿಯೇ ಚಾಸಾ-1 ರವರ ಮನೆಯಲ್ಲಿ ಕಳುವು ಮಾಡಿರುವ ವ್ಯಕ್ತಿ ಎಂದು ಹೇಳಿ ಠಾಣೆಯಲ್ಲಿದ್ದ ಬೈಕನ್ನು ಕೃತ್ಯಕ್ಕೆ ಬಳಸಿರುವುದಾಗಿ ಹೇಳಿ ಸದರಿ ಬೈಕನ್ನು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ಆ ಸಮಯದಲ್ಲಿ ಚಾಸಾ-4 ರವರು ಇದ್ದರು. ನಾನು ಪಂಚನಾಮೆಗೆ ಸಹಿ ಹಾಕಿದ್ದು ಈಗ ಅದನ್ನು ನೋಡುತ್ತಿದ್ದು ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಫೋಟೋ ತೆಗೆದಿದ್ದು ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದು ನಿಪಿ-5 ವತ್ತು 6 ಎಂದು ಗುರುತಿಸಲಾಗಿದೆ. ಫೋಟೋದಲ್ಲಿರುವ ಕಪ್ಪು ಚಡ್ಡಿ ಹಾಕಿರುವ ವ್ಯಕ್ತಿಯೇ ಕಳ್ಳತನ ಮಾಡಿರುವ ಆರೋಪಿ. ಫೋಟೋದಲ್ಲಿರುವ ಬೈಕನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು. ಬಿ. ನಾಯ್ಕರಿಂದಃ**

ಪೋಲೀಸರು ಕರೆದಿದ್ದರಿಂದ ಠಾಣೆಗೆ ಹೋಗಿರುತ್ತೇನೆ. ಪೋಲೀಸರು ಪಂಚನಾಮೆಯನ್ನು ಟೈಪ್ ಮಾಡಿಸಿ ಸಹಿ ಹಾಕುವಂತೆ ಕೇಳಿದ್ದರಿಂದ ಸಹಿ ಹಾಕಿರುತ್ತೇನೆ. ಪೋಲೀಸರು ಬೈಕಿನ ಹತ್ತಿರ ಒಂದು ಫೋಟೋ ತೆಗೆಯಬೇಕು ಎಂದು ಕರೆದಿರುತ್ತಾರೆ. ಅಮಾನತ್ತು ಪಂಚನಾಮೆಗೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಚಾಸಾ-4 ರವರ ಹೇಳಿಕೆ ಪಡೆದಿರುತ್ತಾರೆ, ಆರೋಪಿ ಹೇಳಿಕೆ ಪಡೆದಿಲ್ಲ. ಚಾಸಾ-1 ಮತ್ತು

ನಾನು ಪರಿಚಯಸ್ಥರು. ಚಾಸಾ–1 ಪರಿಚಯಸ್ಥರಾಗಿರುವುದರಿಂದ ಅಮಾನತ್ತು ಪಂಚನಾಮೆಯ ಯಾವ ವಿಚಾರಗಳು ನನಗೆ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**